ಅಸಲು ದಾವಾ ಸಂಖ್ಯೆ 96/2021

ಡಿ ಡಬ್ಲ್ಯೂ: 1

**ದಿನಾಂಕ :** 06.06.2026**ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ – ವಾದಿಗಳ ಪರವಾಗಿ ಶ್ರೀ ಎನ್ ವಿ ಎಂ ವಕೀಲರಿಂದಃ**

ದಾವಾ ಅನುಸೂಚಿತ ಸ್ವತ್ತಿನ ಪೂರ್ವ ಭಾಗದಲ್ಲಿ ನನ್ನ ಸ್ವತ್ತು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಅದು ನನ್ನೇ ಸ್ವತ್ತು ಎಂದು ನುಡಿಯುತ್ತಾರೆ. ದಾವಾ ಅನುಸೂಚಿತ ಸ್ವತ್ತಿನಲ್ಲಿರುವ ಮನೆಯನ್ನು ಹೊರತು ಪಡಿಸಿ ಬೇರೆ ಯಾವುದೇ ಮನೆ ಇಲ್ಲ ಎಂದರೆ ಸಾಕ್ಷಿಯು, ವಾದಿ ಸಲ್ಲಿಸಿರುವ ಮನೆ ನನ್ನದೇ ಆಗಿದ್ದು ನನ್ನ ಮನೆಯನ್ನು ಹೊರತು ಪಡಿಸಿ ಅಲ್ಲಿ ಯಾವುದೇ ಮನೆ ಇಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳಲ್ಲಿ ಮನೆ ನಂಬರ್ ಇರುವುದಿಲ್ಲ. ಸಾಕ್ಷಿಯು ಮುಂದುವರೆದು, ಸದರಿ ಮನೆಯನ್ನು ನನ್ನ ತಾತ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ವಾಸ ಸ್ಥಳದ ದೃಡೀಕರಣ ಪತ್ರ ಹೊರತು ಪಡಿಸಿ, ಮನೆ ನಿರ್ಮಾಣ ಮಾಡಿರುವ ಬಗ್ಗೆ ಪರವಾನಿಗೆ ಪಡೆದ ಬಗ್ಗೆಯಾಗಲೀ, ಖಾತೆಯನ್ನಾಗಲೀ ಹಾಜರು ಪಡಿಸಿಲ್ಲ ಎಂದರೆ ಸರಿ.

ನಾನು ಕನಕಪುರ ತಾಲ್ಲೂಕಿನ ಬೂದುವಾಡಿಯಲ್ಲಿ ವಾಸ ಇದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಆದಾಯಕ್ಕಾಗಿ ಕೆಲಸ ಮಾಡುತ್ತಿದ್ದು ಅಲ್ಲಿ ಬಾಡಿಗೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಪಿ–1 ದಾಖಲಾತಿಯಂತೆ ಜಯರಾಮುರವರ ಹೆಸರಿಗೆ ಖಾತೆಯಾಗಿರುವುದನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು, ನಮಗೆ ಆಗ ಗೊತ್ತಾಗಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯು ದಾವಾ ಅನುಸೂಚಿತ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ನಿಪಿ–5 ರಂತೆ ಕಟ್ಟಡ ಪರವಾನಿಗೆ ಪಡೆದಿದ್ದರು ಎಂದರೆ ಸಾಕ್ಷಿಯು, ಅದು ಸುಳ್ಳು ದಾಖಲಾತಿ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗೆ ಸಂಬಂಧಿಸಿದಂತೆ ನಾನು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಸ್ವತ್ತು ಅಲ್ಲದೇ ಕಾರಣ ನಾನು ಅಪೀಲು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಮಗೆ ಈಗ ಗೊತ್ತಾಗಿರುತ್ತದೆ ಹಾಗಾಗಿ ನಾವು ಈಗ ಕ್ರಮ ಕೈಗೊಂಡಿದ್ದೇವೆ ಎಂದು ನುಡಿಯುತ್ತಾರೆ. ನಾನು ಸ್ವತ್ತಿನಲ್ಲಿ ಯಾವುದೇ ಮನೆ ನಿರ್ಮಾಣ ಮಾಡದೇ ಇದ್ದರೂ ಸಹಾ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ

(ಕಾವ್ಯ ಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ